## ಶತಮಾನದ ತಕ್ಕಡಿ

ಚಿಕ್ಕಬಳ್ಳಾಪುರ– ಬೆಂಗಳೂರು ನಡುವೆ ದಿನಂಪ್ರತಿ ಬೆರಳೆಣಿಕೆಯಷ್ಟು ರೈಲುಗಳು ಚಲಿಸುತ್ತವೆ. ನೀವೇನಾದರೂ ಚಿಕ್ಕಬಳ್ಳಾಪುರ ರೈಲು ನಿಲ್ದಾಣದಲ್ಲಿ ಅತ್ತಿಂದಿತ್ತ ಅಡ್ಡಾಡುತ್ತಿದ್ದರೆ, ಹಳೇಕಾಲದ 'ತೂಕ ಮಾಡುವ ಯಂತ್ರ' ನಿಮ್ಮ ಗಮನ ಸೆಳೆಯುತ್ತದೆ. ಹತ್ತಿರ ಹೋಗಿ ಅದರ ಮೇಲಿರುವ ವಿವರಗಳನ್ನು ನೋಡಿದರೆ, ಅಚ್ಚರಿಪಡುವ ಸರದಿ ನಿಮ್ಮದಾಗುತ್ತದೆ.

ಲಗೇಜ್ ತೂಕಮಾಡಲು ಉಪಯೋಗಿಸುವ ಈ ಯಂತ್ರದ ಸಾಮರ್ಥ್ಯ 250 ಕೆ.ಜಿ. ಆಗಿದ್ದು ಇಂಗ್ಲೆಂಡಿನ ಮ್ಯಾಂಚೆಸ್ಟರ್‌ನಲ್ಲಿರುವ 'ಹಜ್ಸನ್ ಅಂಡ್ ಸ್ಟೆಡ್' ಕಂಪನಿ 1881ರಲ್ಲಿ ಈ ಯಂತ್ರವನ್ನು ತಯಾರಿಸಿದ್ದಾರೆ.

ಚಿಕ್ಕಬಳ್ಳಾಪುರ–ದೇವನಹಳ್ಳಿ ನಡುವೆ ಗೂಡ್ಸ್ ಮತ್ತು ಪ್ರಯಾಣಿಕರ ರೈಲು ಸಂಚಾರ 1915ರಲ್ಲಿ ಪ್ರಾರಂಭಗೊಂಡಿದೆ. ಬಹುಶಃ ಆ ಸಂದರ್ಭದಲ್ಲಿ ಈ ಯಂತ್ರವನ್ನು ಅಳವಡಿಸಿರಬಹುದು. 140 ವರ್ಷಗಳಷ್ಟು ಹಳೆಯದಾದ, ವಿದೇಶಿ ನಿರ್ಮಿತ 'ತೂಕಮಾಡುವ ಯಂತ್ರ' ಇವತ್ತೂ ಸುಸ್ಥಿತಿಯಲ್ಲಿದೆ.

—ಕೆ. ಶ್ರೀಧರ



## ಅಂದ ಛಂದದ ಕಾಮ- ರತಿ



ಕಾಮದಹನ ಅಥವಾ ಹೋಳಿ ಹಬ್ಬ ಉತ್ತರ ಕರ್ನಾಟಕದಲ್ಲಿ ಪ್ರಮುಖ ಹಬ್ಬಗಳಲ್ಲಿ ಒಂದಾಗಿದೆ. ಓಣಿ ಓಣಿಗಳಲ್ಲಿ ಕಾಮದೇವ ಮತ್ತು ರತೀದೇವಿ ಮೂರ್ತಿಗಳನ್ನು ಕೂರಿಸಿ ರಾತ್ರಿಯಲ್ಲಾ ಕೃಷ್ಣ ಪಾರಿಜಾತ, ಸಣ್ಣಾಟ, ದಪ್ಪಿನಾಟ, ಮುಂತಾದ ಜನಪದ ಆಟಗಳನ್ನು ಆಡಿಸುವ ಪದ್ಧತಿ ಇನ್ನೂ ಅಲ್ಲಲ್ಲಿ ಕಾಣಸಿಗುತ್ತದೆ.

ಹಲಗೆಯ ವಾದನ ವಿಶಿಷ್ಟವಾಗಿರುತ್ತದೆ. ಇನ್ನೂ ಕೆಲವಡೆ ಕಾಮನ ಕತೆಯನ್ನು ಸಾರುವ ಅವನ ಮಹಿಮೆಯನ್ನು ಹೊಗಳುವ ಹಾಡುಗಳನ್ನು ಹಾಡುತ್ತಾರೆ. ತಮ್ಮ ಮನೆಯಲ್ಲಿಯೇ ಲಭ್ಯವಿರುವ ಸೀರೆ, ಧೋತರ, ಅಂಗಿ ಮತ್ತು ಮುತ್ತಿನ ಸರಗಳಿಂದ ಕಾಮಣ್ಣ ಮತ್ತು ರತಿದೇವಿ ಮೂರ್ತಿಗಳನ್ನು ತಯಾರಿಸುವ ಹಳ್ಳಿಗರ ಕಲಾ ನೈಪುಣ್ಯತೆ ಮೆಚ್ಚಲೇಬೇಕು. ಶಿವನ ಉರಿಗಣ್ಣಿಗೆ ಬಲಿಯಾದ ಕಾಮ ಎಲ್ಲರ ಮನಸ್ಸಿನಲ್ಲಿ ನೆಲೆಯೂರಿದ್ದ ಎನ್ನುವುದನ್ನು ಪುರಾಣ ಕಥೆಗಳಲ್ಲಿ ನಾವು ಕಾಣುತ್ತೇವೆ. ಹುಕ್ಕೇರಿ ತಾಲ್ಲೂಕಿನ, ಮದಿಹಳ್ಳಿ ಗ್ರಾಮದಲ್ಲಿ ಸ್ಥಾಪಿಸಿದ ಕಾಮ ಮತ್ತು ರತೀದೇವಿಯರ ಚಿತ್ರ ಇಲ್ಲಿದೆ.

—ಕೆ.ಪಿ. ರಾಮಗುಂಡಿ. ಬೈಲಹೊಂಗಲ

## ನೆರವಿನ ಪಣತ

ದಾನವೇ ಪರಮ ಆರಾಧನೆ ಎಂಬ ಚಿಂತನೆಯೊಂದಿಗೆ ಬಡವರು, ಅಶಕ್ತರ ಪಾಲಿಗೆ ನೆರವಾಗುವಂತಹ ವಿನೂತನ ಪ್ರಯೋಗವನ್ನು ಆರಂಭಿಸಿದ ತೀರ್ಥಹಳ್ಳಿ ಪಟ್ಟಣದ ಪಟ್ಟಣ ಪಂಚಾಯತ್ ಕಾಂಪ್ಲೆಕ್ಸ್ ವರ್ತಕರು ಹಾಗೂ ಸಮಾನ ಮನಸ್ಕರು ಮಾನವೀಯ ನೆರವಿನ ಹಸ್ತಚಾಚಿದ್ದಾರೆ.

ಮಲೆನಾಡು ಭಾಗದ ಸಾರ್ವಜನಿಕರು ಸುಸ್ಥಿತಿಯಲ್ಲಿರುವ ಬಟ್ಟೆ, ಬ್ಯಾಗು, ಗೃಹೋಪಯೋಗಿ ವಸ್ತುಗಳು ಸೇರಿದಂತೆ ದವಸ–ಧಾನ್ಯಗಳನ್ನು ಈ ಪಣತಕ್ಕೆ ತಂದು ಹಾಕುವ ವ್ಯವಸ್ಥೆ ಮಾಡಿದ್ದಾರೆ. ಸಂಗ್ರವಾದ ವಸ್ತುಗಳನುನ್ನು ಪ್ರತಿ ತಿಂಗಳ ಮೊದಲ ಶನಿವಾರ ಪಣತದಿಂದ ಹೊರತೆಗೆದು ಅಗತ್ಯವಿರುವವರಿಗೆ ವಿತರಿಸುವ ಸಮಾಜಮುಖಿ ಕಾರ್ಯವನ್ನು ಮಾಡುತ್ತಿದ್ದಾರೆ. ವರ್ತಕರಾದ ಜಾನ್ಸನ್ ಪಿಂಟೊ, ಉಮೇಶ್ ಮೊದಲಾದವರ ಕಾಳಜಿಯಿಂದ ಈ ಯೋಜನೆ ಅನುಷ್ಠಾನ ಮಾಡಲಾಗಿದೆ.

—ರಾಂಚಂದ್ರ ಕೊಪ್ಪಲು, ತೀರ್ಥಹಳ್ಳಿ.

